# ಕರ್ನಾಟಕ ವಿಧಾನ ಪರಿಷತ್

ಚುಕ್ಕೆ ಗುರುತಿಲ್ಲದ ಪ್ರಶ್ನೆ : 665

ಸದಸ್ಯರ ಹೆಸರು : ಶ್ರೀ ಶಾಂತರಾಮ್ ಬುಡ್ನ ಸಿದ್ದಿ (ನಾಮ ನಿರ್ದೇಶನ ಹೊಂದಿದವರು)

ಉತ್ತರಿಸುವವರು : ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ ವಿಕಲಚೇತನರ ಮತ್ತು ಹಿರಿಯ ನಾಗರಿಕರ ಸಬಲೀಕರಣ ಸಚಿವರು

ಉತ್ತರಿಸಬೇಕಾದ ದಿನಾಂಕ : 13.12.2024

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ.</td><td>ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನಲ್ಲಿ ಕಳೆದ 02 ವರ್ಷದಲ್ಲಿ ಎಷ್ಟು ಹೊಸ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ; ಇದರಲ್ಲಿ ಸ್ವಂತ ಕಟ್ಟಡವಿರುವ ಅಂಗನವಾಡಿ ಕೇಂದ್ರಗಳು ಎಷ್ಟು ಹಾಗೂ ಯಾವುವು ಮತ್ತು ಬಾಡಿಗೆ ಕಟ್ಟಡದಲ್ಲಿ ನಡೆಯುವ ಅಂಗನವಾಡಿ ಕೇಂದ್ರಗಳು ಯಾವುವು; ಬಾಡಿಗೆ ಕಟ್ಟಡಕ್ಕೆ ಎಷ್ಟು ಬಾಡಿಗೆಯನ್ನು ನೀಡಲಾಗುತ್ತದೆ.</td><td>2022-23ನೇ ಸಾಲಿನಲ್ಲಿ ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಅಂಗವಾಗಿ ಬೆಳಗಾವಿ ಜಿಲ್ಲೆ ಖಾನಾಪುರ ತಾಲ್ಲೂಕಿನಲ್ಲಿ ಒಟ್ಟು 19 ಹೊಸ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಲಾಗಿದೆ. ಅವುಗಳ ವಿವರ ಈ ಕೆಳಕಂಡಂತಿದೆ.<br><table><tr><th>ಶಾಲೆ</th><th>ಸಮುದಾಯ ಭವನ</th><th>ಯುವಕ ಮಂಡಳಿ/ ಪಂಚಾಯತ್ ಕಟ್ಟಡ/ ಇತರೆ ಪರ್ಯಾಯ ವ್ಯವಸ್ಥೆ</th></tr><tr><td>7</td><td>4</td><td>8</td></tr></table><br>ಯಾವುದೇ ಅಂಗನವಾಡಿ ಕೇಂದ್ರವನ್ನು ಬಾಡಿಗೆಯಲ್ಲಿ ನಡೆಸಲಾಗುತ್ತಿಲ್ಲ.<br>ಬಾಡಿಗೆಯಲ್ಲಿ ನಡೆಯುತ್ತಿರುವ ಅಂಗನವಾಡಿ ಕೇಂದ್ರಗಳಿಗೆ, ಪ್ರತಿ ತಿಂಗಳಿಗೆ ಈ ಕೆಳಕಂಡಂತೆ ಬಾಡಿಗೆಯನ್ನು ನಿಗದಿಪಡಿಸಲಾಗಿದೆ.<br><table><tr><td>ಮಹಾನಗರ ಪಾಲಿಕೆಯ ಅಂಗನಾವಡಿ ಕೇಂದ್ರ –</td><td>ರೂ.8000/-</td></tr><tr><td>ನಗರ ಪ್ರದೇಶಗಳಲ್ಲಿನ ಅಂಗನಾವಡಿ ಕೇಂದ್ರ-</td><td>ರೂ.6000/-</td></tr><tr><td>ಗ್ರಾಮೀಣ ಪ್ರದೇಶದ ಅಂಗನಾವಡಿ ಕೇಂದ್ರ -</td><td>ರೂ.2000/-</td></tr></table></td></tr>
<tr><td>ಆ.</td><td>ಖಾನಾಪುರ ತಾಲ್ಲೂಕಿನ ಗೊಧೋಳಿ ಪಂಚಾಯಿತಿ ವ್ಯಾಪ್ತಿಯ ಔರತಬೈಲ್ ಗ್ರಾಮದಲ್ಲಿ ಸುಮಾರು 35ಕ್ಕೂ ಹೆಚ್ಚು ಹಿಂದುಳಿದ ವರ್ಗದ ಕುಟುಂಬಗಳು ಮತ್ತು 25ಕ್ಕೂ ಹೆಚ್ಚು ಅಂಗನವಾಡಿ ವಯಸ್ಸಿನ ಮಕ್ಕಳಿದ್ದು, ಆ ಗ್ರಾಮಕ್ಕೆ ಅಂಗನವಾಡಿ ಕೇಂದ್ರದ ಬೇಡಿಕೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ; ಆದ್ಯತೆಯ ಮೇರೆಗೆ</td><td>ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ, ಹೊಸ ಅಂಗನವಾಡಿ ಕೇಂದ್ರ ಪ್ರಾರಂಭಿಸಲು ನಗರ ಹಾಗೂ ಗ್ರಾಮೀಣ ಪ್ರದೇಶದಲ್ಲಿ ಕನಿಷ್ಠ 400 ರಿಂದ 800 ಜನಸಂಖ್ಯೆ ಹಾಗೂ ಗುಡ್ಡಗಾಡು ಪ್ರದೇಶದಲ್ಲಿ ಕನಿಷ್ಠ 300 ರಿಂದ 800 ಜನಸಂಖ್ಯೆ ಹೊಂದಿರಬೇಕಾಗಿರುತ್ತದೆ.<br>ಖಾನಾಪುರ ತಾಲೂಕಿನ ಗೊಧೋಳಿ ಪಂಚಾಯತಿ ವ್ಯಾಪ್ತಿಯ ಔರತಬೈಲ್ ಗ್ರಾಮದಲ್ಲಿ ಕೇವಲ 134 ಜನಸಂಖ್ಯೆ ಇರುವುದರಿಂದ, ಹೊಸ ಅಂಗನವಾಡಿ</td></tr>
</table>

| | | |
|---|---|---|
| | ಕಾಡಿನಲ್ಲಿ ಇರುವ ಈ ಗ್ರಾಮಕ್ಕೆ ಹೊಸ ಅಂಗನವಾಡಿ ಕೇಂದ್ರುವನ್ನು ಪ್ರಾರಂಭಿಸಲು ಸರ್ಕಾರ ಕೈಗೊಳ್ಳುವ ಕ್ರಮಗಳು ಯಾವುವು? | ಕೇಂದ್ರ ಪ್ರಾರಂಭಿಸಲು ಮಾರ್ಗಸೂಚಿಯನ್ವಯ ಅವಕಾಶ ಇರುವುದಿಲ್ಲ. ಸಮೀಕ್ಷೆಯಂತೆ ಸದರಿ ಗ್ರಾಮದಲ್ಲಿ 6 ತಿಂಗಳಿನಿಂದ 6 ವರ್ಷದ ಒಟ್ಟು 07 ಮಕ್ಕಳು ಗರ್ಭಿಣಿ-1, ಬಾಣಂತಿಯರು-02 ಫಲಾನುಭವಿಗಳಿದ್ದು, ಸದರಿ ಫಲಾನುಭವಿಗಳನ್ನು ಸಮೀಪದ ಬಾಳಗುಂದ ಅಂಗನವಾಡಿ ಕೇಂದ್ರಕ್ಕೆ ದಾಖಲಿಸಿಕೊಂಡು ಇಲಾಖೆಯ ಸೇವೆಗಳನ್ನು ಒದಗಿಸಲಾಗುತ್ತಿದೆ. |

**ಸಂಖ್ಯೆ: ಮಮಇ 312 ಐಸಿಡಿ 2024**

**(ಲಕ್ಷ್ಮೀ ಆರ್. ಹೆಬ್ಬಾಳಕರ್)**
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಹಾಗೂ
ವಿಕಲಚೇತನರ ಮತ್ತು ಹಿರಿಯ ನಾಗರಿಕರ
ಸಬಲೀಕರಣ ಸಚಿವರು.